ಒಳಗೆ ನಡೆದಾಗ; ಇಬ್ಬರಿಗೂ ಕಣ್ಣುಗಳಲ್ಲಿ ಕಲೆತ ನೀರನ್ನು ಕಾಣಿಸಿಕೊಳ್ಳುವುದಿರಲಿಲ್ಲವೇನೋ!

ಸಂಜೆ ಐದನ್ನು ದಾಟಿತ್ತು. ಅಸ್ತದ ಕಡೆಗೆ ಇಳಿಮುಖನಾಗಿದ್ದ ಸೂರ್ಯ ಸರಿಯಾಗಿ ಬಾಲ್ಕನಿಯ ಇದಿರಿಗೇ ಬಂದು ಬಂಗಾರದ ಬೆಳಕನ್ನು ಹಾಲಿನೊಳಕ್ಕೆ ತೂರುತ್ತಿದ್ದ. ಈ ಅಲೌಕಿಕ ಬೆಳಕು ಒಮ್ಮೆಲೇ ಅಂತರ್ಮುಖಿಗಳಾದವರ ಕಣ್ಣುಗಳನ್ನು ತಟ್ಟಿಯೂ ಅರ್ಥಪೂರ್ಣವಾದ ಬಿಂಬವಾಗಲು ಅಸಮರ್ಥವಾದಂತಿತ್ತು. ಅಂತಃಕರಣದ ಹಲವು ಸ್ವರಗಳನ್ನು ಜುಮ್ಮುದಟ್ಟುವಂತೆ ಮಾಡಿದ ಮಾತುಗಳಲ್ಲಿ ಮೂಡಿ ಬಂದ ಹೃದಯವಿದ್ರಾವಕ ಕತೆ ಉತ್ತರ ಹೊಳೆಯದ, ಬಹುಶಃ ಉತ್ತರವೇ ಇಲ್ಲದ ಪ್ರಶ್ನೆಗಳಾಗಿ ಮನಸ್ಸಿನ ಆಳಕ್ಕೆ ಇಳಿಯತೊಡಗಿತ್ತು. ಮೆಲ್ಲಗೆ, ರಾವ್‌ಜೀಬಾಯಿ ಮಾತಿಗೆ ತೊಡಗುವ ಮೊದಲು ಕೇಳಿದ ಪ್ರಶ್ನೆಯೆ ಈ ಎಲ್ಲ ಪ್ರಶ್ನೆಗಳಿಗೆ ಜೀವ ತುಂಬುತ್ತಿದ್ದಂತಿತ್ತು; 'ನಮ್ಮ ಮಕ್ಕಳನ್ನು ನಮ್ಮವು ಎಂದು ಕರೆಯುವುದಕ್ಕೆ ಅವು ನಮ್ಮ ಹೊಟ್ಟೆಯಲ್ಲಿ ಹುಟ್ಟಿದವುಗಳು ಎಂಬ ಒಂದೇ ಕಾರಣಕ್ಕಾಗಿ ಅಲ್ಲವೆ?' ಪ್ರಶ್ನೆಯ ಒಕ್ಕಣಿಕೆಗಿಂತ ಹೆಚ್ಚಾಗಿ ಇಂಥ ಪ್ರಶ್ನೆಯ ಹುಟ್ಟೇ ಜಮಶೇದ– ಫ್ರೇನಿಯರ ದಿಗ್ಭ್ರಮೆಗೆ ಕಾರಣವಾದಂತಿತ್ತು. ರಾವ್‌ಜೀಭಾಯಿ ಸ್ಪಷ್ಟ ಶಬ್ದಗಳಲ್ಲಿ ಕೇಳುವ ಮೊದಲು ಇಂಥ ಪ್ರಶ್ನೆಯೇ ಸಾಧ್ಯವೆಂದು ತೋರಿರಲಿಲ್ಲ. ಹೊತ್ತು ಹೋದ ಹಾಗೆ– 'ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಾತ್ರಕ್ಕೇ ಇವು ನಮ್ಮ ಮಕ್ಕಳೆಂದು ತಿಳಿಯಬಹುದೆ?' ಎಂದೋ, 'ನಮ್ಮ ಹೊಟ್ಟೆಯಲ್ಲಿ ಹುಟ್ಟಿದವುಗಳನ್ನು ಮಾತ್ರ ನಮ್ಮದೆಂದು ಕರೆಯಬಹುದೆ?' ಎಂದು ಮುಂತಾಗಿ ಪ್ರಶ್ನೆಯ ಒಕ್ಕಣಿಕೆ ಬದಲಾಗತೊಡಗಿದಾಗ ಈವರೆಗಿನ ಆಯುಷ್ಯದಲ್ಲಿ ಅನುಭವಕ್ಕೆ ಬಂದಿರದಂಥ ಅಧೀರತೆಗೆ ಮೊದಲಾಯಿತು. ಕೆಲವೇ ತಾಸುಗಳ ಮೊದಲು ಎಲ್ಲಿಲ್ಲದ ಉತ್ಸುಕತೆ ಉತ್ಸಾಹಗಳಿಗೆ ಕಾರಣವಾದ ರಾವ್‌ಜೀಭಾಯಿಯ ಭೇಟಿ ಈಗ ಇದ್ದಕ್ಕಿದ್ದ ಹಾಗೆ ಜೀವ ತತ್ತರಿಸುವಂತೆ ಮಾಡುವ ಭಯಕ್ಕೆ ಎಡೆಮಾಡಿಕೊಡಹತ್ತಿತು. ಈ ಭೇಟಿ ತಾವು ಮೊದಲು ತಿಳಕೊಂಡಷ್ಟು ಆಕಸ್ಮಿಕವಾದದ್ದಲ್ಲವೇನೋ ಎಂದೆನ್ನಿಸಿದಾಗ, ಮಲಗುವ ಕೋಣೆಯಿಂದ ಹೊರಬೀಳುವಾಗಲೇ– ಅಮೆರಿಕೆಗೆ ವಲಸೆಹೋಗುವ ವಿಚಾರ ಮಾಡುತ್ತಿದ್ದ ಸೋರಾಬ– ಡಾಯನಾರ ಬಗ್ಗೆ ಹೇಳಿಕೊಳ್ಳಲು ಕೇಳುಗ ಸಿಕ್ಕನೆಂಬ ವಿಚಾರದಿಂದ– ಹುಟ್ಟಿದ ಉತ್ಸಾಹ ಈಗ ಇಲ್ಲವಾಯಿತು. ತಾವಿಬ್ಬರೂ ಇದೇ ಈಗ ಅದನ್ನೇ ಕುರಿತು ವಿಚಾರ ಮಾಡುತ್ತಿದ್ದೇವೆ ಎನ್ನುವುದು ಗೊತ್ತಾದವರ ಹಾಗೆ ಒಬ್ಬರನ್ನೊಬ್ಬರು ನೋಡಿದರು. ಕತೆ ಹೇಳಿ ಮುಗಿಸಿದ ಮುದುಕ ಬಹುಶಃ ತಮ್ಮ ಪ್ರತಿಕ್ರಿಯೆಯ ಹಾದಿ ಕಾಯುತ್ತಿದ್ದಾನೆ. ಸಹಾನುಭೂತಿ ಬಯಸುತ್ತಿದ್ದಾನೆ ಅನ್ನಿಸಿದರೂ ಬಾಯಿ ತೆರೆಯುವ ಧೈರ್ಯವೇ ಆಗಲಿಲ್ಲ; ಅರೆಗಳಿಗೆಯ ಮಟ್ಟಿಗೇ ಆದರೇನಂತೆ ಮನಸ್ಸನ್ನು ತಟ್ಟಿಹೋದ ಗುಮಾನಿಗೆ ಮೈಯ ತ್ವಚೆ ಒಮ್ಮೆಲೇ ತನ್ನ ಬಿಸಿ ಕಳಕೊಳ್ಳುತ್ತಿದೆಯೆನ್ನುವಂಥ ಭಾಸವಾಯಿತು; ಈ ಮುದುಕ ಹೇಳಿದ ಕತೆ ಅವನ ಮಗನ ಕತೆಯಾಗಿ ತೋರಲೇ ಇಲ್ಲ. ಅವನು ನಿಜಕ್ಕೂ ಹೇಳಲು ಬಂದದ್ದು ತಮ್ಮ ಸೋರಾಬನ ಕತೆಯನ್ನೇ. ಅದೂ ಅಲ್ಲವೇನೋ. ಅವನು ವರ್ಣಿಸಿದ ಭೂಪ್ರದೇಶವನ್ನು ನೆನೆದರೆ ಅದು ನಮ್ಮ ಕಾಲದ ಕತೆಯೆಂದೇ ತೋರುವದಿಲ್ಲ. ಪ್ರತಿಯೊಬ್ಬನಿಗೂ, ನೋಡಿದ ಪ್ರತಿಸಾರೆ, ಕೇವಲ ತನ್ನವನಾಗಿ ಕಂಡ ಮುಗ್ಧ ಬಾಲಕನಿದ್ದ ಆ ಕತೆಯಲ್ಲಿ. ಬಣ್ಣ ಬಣ್ಣದ ಕಣ್ಣುಗಳುಳ್ಳ ನವಿಲುಗರಿಗಳಂಥ ಮೋಡಗಳಿದ್ದುವಂತೆ ಅಲ್ಲಿಯ ನೀಲಿ ಆಕಾಶದಲ್ಲಿ! ಅಲ್ಲಿಯ ಬೆಟ್ಟಗಳಿಂದ ಹರಿಯುವ ಝರಿಗಳಲ್ಲಿ ಗೆಜ್ಜೆಯ ಧ್ವನಿಯಿತ್ತು ಎಂದಿರಲಿಲ್ಲವೆ? ಮರಗಳಲ್ಲಿ ಬೀಸುತ್ತಿದ್ದ ಗಾಳಿಯಲ್ಲಿ ಕೊಳಲ ನಾದ ಕೇಳಿಸುತ್ತಿತ್ತು ಎಂದಿರಲಿಲ್ಲವೆ? ಅಥವಾ ತನಗೇ ಭ್ರಮೆಯೆ? ರಾತ್ರಿ